ಎಸ್.ಸಿ.ಸಂಖ್ಯೆಃ 10047/2025
ಪ್ರಾ.ಸಾ.ಸಂಖ್ಯೆಃ 03
ಚಾ.ಸಾ.ಸಂಖ್ಯೆಃ 10

**ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ**

**ಎಸ್.ಸಿ.ಸಂಖ್ಯೆಃ 10047/2025**

| | |
|---|---|
| ಹೆಸರುಃ | ಮುತ್ತಪ್ಪ ಮಾದರ |
| ತಾಯಿಯ ಹೆಸರುಃ | ಗೌರವ್ವ |
| ವಯಸ್ಸುಃ | 42 ವರ್ಷ |
| ಉದ್ಯೋಗಃ | ಕೂಲಿ ಕೆಲಸ |
| ವಾಸಃ | ಮಂಟೂರ |

**ಸಾಕ್ಷಿಯನ್ನು ದಿಃ 05.12.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ-**

1. ನನಗೆ ಚಾಸಾ-1 ಇವರ ಪರಿಚಯ ಇಲ್ಲ. ನನಗೆ ಆರೋಪಿತರ ಪರಿಚಯ ಇಲ್ಲ. ಅವರ ನಡುವಿನ ವ್ಯವಹಾರದ ಬಗ್ಗೆ ನನಗೆ ಗೊತ್ತಿಲ್ಲ. ನಾನು ಚಾಸಾ-11 ಈತನಿಗೆ ಸಾಲ ನೀಡಿಲ್ಲ. ಆರೋಪಿತರು ಹಾಗೂ ಚಾಸಾ-1 ಇವರ ಜಗಳ ನೋಡಿಲ್ಲ, ಬಿಡಿಸಿಲ್ಲ, ನಾನು ಈ ಬಗ್ಗೆ ಯಾವುದೇ ಹೇಳಿಕೆ ನೀಡಿಲ್ಲ.

**(ಈ ಹಂತದಲ್ಲಿ ಸರಕಾರಿ ಅಭಿಯೋಜಕರು ಸಾಕಿಃದಾರರನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಲು ಮನವಿ ಮಾಡಿದ್ದು, ಸಾಕ್ಷಿದಾರರು ಪೂರ್ಣ ಪ್ರತಿಕೂಲ ಪ್ರವೃತ್ತಿ ತೋರಿಸಿರುವುದರಿಂದ ಸಾಕ್ಷಿದಾರರನ್ನು**

**ಎಸ್.ಸಿ.ಸಂಖ್ಯೆಃ 10047/2025**
**ಪ್ರಾ.ಸಾ.ಸಂಖ್ಯೆಃ 03**
**ಚಾ.ಸಾ.ಸಂಖ್ಯೆಃ 10**

**ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಸರಕಾರಿ ಅಭಿಯೋಜಕರಿಗೆ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿಸಲಾಯಿತು.)**

**<u>ಪಾಟೀ ಸವಾಲುಃ ಸರ್ಕಾರಿ ಅಭಿಯೋಜಕರಿಂದಃ-</u>**

1. ಈ ಹಿಂದೆ ನಾನು ಚಾಸಾ-11 ಇವರಿಗೆ ಕೈಗಡ ಹಣ ನೀಡಿದ್ದು ಅವರು ಹಣ ಮರಳಿಸಿರಲಿಲ್ಲ, ಆ ಬಗ್ಗೆ ದಿನಾಂಕಃ 22.06.2021 ರಂದು ನಾನು ಚಾಸಾ-11 ಇವರಿಂದ ನನ್ನ ಹಣ ಕೊಡಿಸು ಅಂತಾ ಹೇಳಿ ಹೋಗಿದ್ದೆ ಎಂದರೆ ಸರಿಯಲ್ಲ.

2. ನಂತರ ದಿನಾಂಕಃ 22.06.2021 ರಂದು ನಾನು ಮುಧೋಳಕ್ಕೆ ಸಂತೆಗೆ ಬಂದಾಗ ಚಾಸಾ-1 ಇವರು ಭೇಟಿಯಾಗಿ ಹಣದ ಬಗ್ಗೆ ತಾನು ಚಾಸಾ-11 ಇವರಿಗೆ ಹೇಳಿದಾಗ ಆರೋಪಿ 2 ನಾನು ಬಸ ನಿಲ್ದಾಣದ ಹತ್ತಿರ ಇರುವಾಗ ರೊಕ್ಕ ಕೊಡು ಅಂತಾ ಹೇಳಲು ನಿನ್ಯಾರು ಅಂತಾ ಹೇಳಿ ಬೈಯ್ದಾಡಿ ಬಡಿಗೆಯಿಂದ ಹೊಡೆದು ಹೋಗಿದ್ದ ಅಂತಾ, ತಾನು ಅದನ್ನು ತನ್ನ ತಾಯಿಗೆ ಈ ವಿಷಯವನ್ನು ಹೇಳಿದ ಅಂತಾ, ತನ್ನ ತಾಯಿ ಆರೋಪಿತರಿಗೆ ಹೇಳಿದಳು ಅಂತಾ, ದಿನಾಂಕಃ 27.02.2021 ರಂದು ಮದ್ಯಾಹ್ನ ತಾನು ಮಲಗಿದ್ದಾಗ ಆರೋಪಿತರೆಲ್ಲರು ಮನೆಗೆ ಬಂದು, ತನಗೆ ಹಾಗೂ ತನ್ನ ತಾಯಿ ಹಾಗೂ ಮನೆಯವರಿಗೆ ಬಡಿಗೆ ಹಾಗೂ ಕೈಗಳಿಂದ ಹಲ್ಲೆ ಮಾಡಿ, ಅವಾಚ್ಯ ಶಬ್ದಗಳಿಂದ ಬೈಯ್ದು ಕೊಲೆ ಮಾಡಲು ಪ್ರಯತ್ನಿಸಿ ಹೋದರು ಅಂತಾ ನನಗೆ ಹೇಳಿದರು.

**ಎಸ್.ಸಿ.ಸಂಖ್ಯೆಃ 10047/2025**
**ಪ್ರಾ.ಸಾ.ಸಂಖ್ಯೆಃ 03**
**ಚಾ.ಸಾ.ಸಂಖ್ಯೆಃ 10**

3. ನಂತರ ನಾನು ಈ ವಿಷಯದ ಬಗ್ಗೆ ಈಗ ಓದಿ ಹೇಳಿದಂತೆ ಅಂದರೆ "ಮುಧೋಳದ ಹಿರೇಕೆರಿ ಗಲ್ಲಿಯ ಶೇಖರ .......... ಅಂತಾ ಒಗ್ಗೆರೆ ವಿಷಯ ಹೇಳಿದರು" ಅಂತಾ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. (ಸದರಿ ಹೇಳಿಕೆಯ ಭಾಗವನ್ನು ನಿಪಿ-8 ಅಂತಾ ಗುರುತಿಸಲಾಯಿತು.)

4. ಘಟನೆಯ ವಿವರವನ್ನು ಕೇಳಿ ತಿಳಿದು, ನಿಪಿ-8 ರಂತೆ ಹೇಳಿಕೆ ನೀಡಿದ್ದರೂ ಸಹ, ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ**

ಪಾಟೀ ಸವಾಲು ಇರುವುದಿಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ. ಸರಿ ಅದೆ.**

Sd/-

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**